# ಉಡುಪಿಯ ಸಾರ್ಥಕ ಸ್ಮಾರಕ

ಸುಮಾರು ನೂರು ವರ್ಷಗಳ ಹಿಂದೆ ರೇಡಿಯೊ ಎಂಬುದು ಶ್ರೀಸಾಮಾನ್ಯರ ಕೈಗೆ ಎಟುಕದ ಗಗನ ಕುಸುಮವಾಗಿತ್ತು. ಬಾನುಲಿ ಪ್ರಸಾರ ಬೆಳಿಗ್ಗೆ ಹಾಗೂ ಸಂಜೆ ನಿಯಮಿತ ಸಮಯದವರೆಗೆ ಮಾತ್ರ ಇರುತ್ತಿತ್ತು. ಬಹಳಷ್ಟು ಕೇಳುಗರ ಅನುಕೂಲಕ್ಕಾಗಿ ಈ ರೇಡಿಯೊ ಗೋಪುರವನ್ನು ಕಟ್ಟಿಸಿ, ಎತ್ತರದಲ್ಲಿ ನಾಲ್ಕು ಧ್ವನಿವರ್ಧಕವನ್ನು ಒದಗಿಸಲಾಗಿತ್ತು. ಸುತ್ತಮುತ್ತಲಿನ ಕಲ್ಲುಬಂಡೆಗಳ ಮೇಲೆ ಹಾಗೂ ಉದ್ಯಾನವನದಲ್ಲಿ ಆಸಕ್ತರು ದೂರದಲ್ಲಿ ಕುಳಿತು ರೇಡಿಯೊ ಕಾರ್ಯಕ್ರಮಗಳನ್ನು ಆಲಿಸಿ ಆಸ್ವಾದಿಸುತ್ತಿದ್ದರು. ಈ ಚಿತ್ರದಲ್ಲಿ ಕಾಣುತ್ತಿರುವ ಗೋಪುರದಲ್ಲಿ ನಿಗದಿತ ಸಮಯದಲ್ಲಿ (ದಿನಕ್ಕೆ ಐದು ಬಾರಿ) ಸೈರನ್ ಮೊಳಗಿಸುವ ವ್ಯವಸ್ಥೆ ಕೂಡ ಮಾಡಲಾಗಿತ್ತು. ಅದರ ಧ್ವನಿಯು ಸುಮಾರು ಐದು ಕಿ.ಮೀ. ದೂರದವರೆಗೆ ತಲುಪುತ್ತಿತ್ತು. ಗಡಿಯಾರವಿರದ ಆ ಕಾಲದ ಹಳ್ಳಿಗರ ಸಮಯ ಸೂಚಕವೂ ಆಗಿತ್ತು.

ತಂದೆ ಭುಜಂಗ ರಾಯರ ಸವಿನೆನಪಿಗಾಗಿ ಆಗಿನ ಮದ್ರಾಸ್‌ನಲ್ಲಿದ್ದ ಮಗ ಡಾ. ನಾರಾಯಣ ರಾಯರ ಕೊಡುಗೆಯಾದ ಈ ಗೋಪುರ ನಿರ್ಮಾಣದ ಜನಸೇವೆ ಸಾರ್ಥಕವಾಗಿತ್ತು. ಈಗ ಸೈರನ್ ಮೊಳಗದಿದ್ದರೂ, ರೇಡಿಯೊ ಧ್ವನಿ ಇಲ್ಲದಿದ್ದರೂ, ಗಟ್ಟಿಮುಟ್ಟಾದ ಈ ಅಪರೂಪದ ಗೋಪುರ, ಉಡುಪಿಯ ಒಂದು ಪಾರಂಪರಿಕ ಕಟ್ಟಡವಾಗಿದೆ.

–ರಮೇಶ್ ಬಿ.ಎಂ., ಬಾರಕೂರು






# ಈ ಊರ ಹೆಸರೇ ಗೂಗಲ್!

ಬೆಂಗಳೂರಿಂದ ಚಿತ್ರದುರ್ಗಕ್ಕೆ ಹೋಗುವಾಗ ನಡುವೆ ಊಟಕ್ಕೆಂದು 10 ನಿಮಿಷ ಹೋಟೆಲ್‌ವೊಂದರ ಬಳಿ ಬಸ್ಸನ್ನು ನಿಲ್ಲಿಸಲಾಯಿತು. ಆ ಹೋಟೆಲ್‌ನ ಮುಂದೆ ಸಾಕಷ್ಟು ಬಸ್ಸುಗಳು ನಿಂತಿದ್ದವು. ಹೋಟೆಲ್‌ಗೆ ಅವುಗಳ ಮುಂದೆಯೇ ಹಾದು ಹೋಗುವಾಗ ಅಲ್ಲಿದ್ದ ಬಸ್ಸೊಂದರಲ್ಲಿ ಅಳವಡಿಸಿದ್ದ ನಾಮಫಲಕದ ಮೇಲೆ ಬರೆದಿದ್ದ ಸ್ಥಳದ ಹೆಸರು ಅಚಾನಕ್ಕಾಗಿ ಕಣ್ಣಿಗೆ ಬಿದ್ದು ಆಶ್ಚರ್ಯ ಮೂಡಿಸಿತು.

ಫೋನ್ ಹಾಗೂ ಕಂಪ್ಯೂಟರ್‌ಗಳಲ್ಲಿ ಸಾಮಾನ್ಯವಾಗಿ ನೆರವಿಗೆ ಬರುವ ಗೂಗಲ್‌ನ ಹೆಸರು ಆ ನಾಮಫಲಕದಲ್ಲಿತ್ತು. ಗೂಗಲ್ ಸಂಸ್ಥೆಗೇನಾದರೂ ಈ ಬಸ್ ಪ್ರಯಾಣಿಕರನ್ನು ಕರೆದೊಯ್ಯುತ್ತದೆಯೇ ಎಂಬ ಸಂಶಯವೂ ಮೂಡಿತಾದರೂ ವಾಸ್ತವವಾಗಿ ಅದು ಗ್ರಾಮ ಅಥವಾ ಸ್ಥಳವೊಂದರ ಹೆಸರಾಗಿತ್ತು. ಅದರ ಬಗ್ಗೆ ಇನ್ನಷ್ಟು ತಿಳಿದುಕೊಳ್ಳುವ ಕುತೂಹಲ ಮೂಡಿತಾದರೂ ಅದಕ್ಕೆ ಕಂಡಕ್ಟರ್ ಸಹಿತ ಯಾರೂ ಅಲ್ಲಿರಲಿಲ್ಲ.

–ಮಧುಮತಿ ಅಭಿಷೇಕ್, ಬೆಂಗಳೂರು



# ಶ್ರವಣ ಕುಮಾರನಿಗೊಂದು ಗುಡಿ!

ರಾಮಾಯಣದಲ್ಲಿ ಬರುವ ಪಿತೃವಾಕ್ಯ ಪರಿಪಾಲಕ ಶ್ರವಣಕುಮಾರನ ಕಥೆ, ಬಹಳ ವಿಶಿಷ್ಟವಾದುದು. ಅಂಥ ವೃದ್ಧ ತಂದೆ–ತಾಯಿಯರನ್ನು ತಕ್ಕಡಿಯಲ್ಲಿ ಕೂರಿಸಿಕೊಂಡು ತೀರ್ಥಯಾತ್ರೆ ಮಾಡಿಸುವಾಗ ದಶರಥ ಮಹಾರಾಜನ ಶಬ್ದವೇಧಿ ಬಾಣಕ್ಕೆ ತುತ್ತಾಗಿ ಸಾವನ್ನಪ್ಪುವ ಶ್ರವಣಕುಮಾರ, ಕೌಟುಂಬಿಕ ಮೌಲ್ಯಗಳ ತ್ಯಾಗದ ಪ್ರತೀಕ. ಈ ಘಟನೆ ನಮ್ಮ ರಾಜ್ಯದ ಚಿತ್ರದುರ್ಗ ಜಿಲ್ಲೆಯ ದಶರಥರಾಮೇಶ್ವರ ಕ್ಷೇತ್ರದಲ್ಲಿ ನಡೆದಿದ್ದು ಎಂಬ ಐತಿಹ್ಯವಿದೆ.

ಹೊಸದುರ್ಗ ತಾಲ್ಲೂಕಿನ ಈ ದಶರಥ ರಾಮೇಶ್ವರ ದೇಗುಲ, ಬಹಳ ವಿಶಿಷ್ಟವಾದ ಸುಂದರವಾದ ಧಾರ್ಮಿಕ ತಾಣ. ಇಲ್ಲಿ ಬೃಹತ್ ಆಲದ ಮರದ ಹಿಂದಿರುವ ಗುಹಾ ದೇವಾಲಯದಲ್ಲಿ ಲಿಂಗ ರೂಪಿ ಈಶ್ವರ ನೆಲೆಸಿದ್ದಾನೆ. ಅದರ ಹಿಂದೆ ಕಲ್ಲುಬಂಡೆಗಳಿಂದ ನಿರಂತರವಾಗಿ ನೀರಧಾರೆ ಹರಿಯುತ್ತದೆ. ಇಲ್ಲಿ ಶ್ರವಣಕುಮಾರ ತಂಬಿಗೆಯಲ್ಲಿ ನೀರು ತುಂಬಿಸುವಾಗ ಬಂದ ಶಬ್ದವನ್ನು ದಶರಥ ಮಹಾರಾಜ, ಪ್ರಾಣಿ ಎಂದು ಭಾವಿಸಿ ಬಾಣಪ್ರಯೋಗ ಮಾಡಿದನೆಂದು ಪುರಾಣ ಹೇಳುತ್ತದೆ. ಹೀಗಾಗಿ ಇಲ್ಲಿ ಶ್ರವಣಕುಮಾರನ ಗುಡಿಯನ್ನು ನಿರ್ಮಿಸಲಾಗಿದೆ. ತನ್ನ ತಂದೆ–ತಾಯಿಯನ್ನು ತಕ್ಕಡಿಯಲ್ಲಿ ಹೊತ್ತೊಯ್ಯುತ್ತಿರುವ ಶ್ರವಣಕುಮಾರನ ಆಕರ್ಷಕ ವಿಗ್ರಹವೂ ಗುಡಿಯಲ್ಲಿದೆ.

–ಎಚ್.ಎಸ್. ನವೀನ ಕುಮಾರ್, ಹೊಸದುರ್ಗ



